Statements regarding Kerosene supply at Bangalore.

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಶನಿವಾರದ ದಿವಸ ಜೀರೋ ಅವರ್‌ನಲ್ಲಿ ನಾನು ಏನೋ ಹೇಳಬೇಕು ಎಂದಾಗ ತಾವು, ಶನಿವಾರ ಬೇಡ, ಸೋಮವಾರ ಮಾತನಾಡಿ ಎಂದು ಹೇಳಿದಿರಿ ಆ ಬಗ್ಗೆ ಈಗ ಮಾತನಾಡುತ್ತಿದ್ದೇನೆ. ಹೋದ ಗುರುವಾರ ೨೦ನೇ ತಾರೀಖು ಮಾನ್ಯ ಆಹಾರ ಮಂತ್ರಿಗಳು, ಶ್ರೀ ಕೆ. ಕೆ. ಮೂರ್ತಿಯವರು, ಸೀಮೆಎಣ್ಣೆ ಲೆಸನ್ಸ್ ತೆಗೆದುಕೊಂಡಿಲ್ಲ ಎಂದು ಪೇಪರುಗಳಲ್ಲಿ ಶುಕ್ರವಾರ ಪತ್ರಿಕೆಯಲ್ಲಿ ವರದಿಯಾಗಿದೆ. ಹಿಂದಿನ ದಿವಸ ಅವರು ಲೈಸನ್ಸ್ ತೆಗೆದು ಕೊಳ್ಳಲಿಲ್ಲ ಎಂದು ಹೇಳಲಿಲ್ಲ, ಎಂದು ಮಂತ್ರಿಗಳು ಹೇಳಿದ್ದಾರೆ. ಮಂತ್ರಿಗಳು ಇವತ್ತು ಅಡಿದ ಮಾತನ್ನು ನಾಳೆ ಬದಲಾಯಿಸುತ್ತಾರೋ, ಪ್ರತಿಕೆಗಳು ವರದಿಗಳನ್ನು ಸರಿಯಾಗಿ ಮಾಡುತ್ತಾ ಇಲ್ಲವೋ ಎಂದು ನಮಗೆ ಅನುಮಾನ ಬಂದಿದೆ., ಪತ್ರಿಕೆಗಳ ಮೇಲೂ ಅನುಮಾನ ಬಂದಿದೆ. ಮಂತ್ರಿಗಳ ಮೇಲೂ ಅನುಮಾನ ಬಂದಿದೆ. ತಮ್ಮಲ್ಲಿ ಪ್ರಾರ್ಥನೆ ಮಾಡುವುದು ಏನೆಂದರೆ, ಪತ್ರಿಕೆಗಳಲ್ಲಿ ವರದಿ ಬಂದಿರುವುದು, ಮಾನ್ಯ ಮಂತ್ರಿಗಳ ಹೇಳಿಕೆಯನ್ನು ತಮ್ಮ ರಿಪೋರ್ಟರ್ಸ್ ಏನು ರಿಪೋರ್ಟು ಮಾಡಿದ್ದಾರೆ. ಅದನ್ನು ತರಿಸಿ ನೋಡಿ ಮಾನ್ಯ ಮಂತ್ರಿಗಳು ತಪ್ಪಾಗಿ ಹೇಳಿದ್ದರೆ, ಅವರು ಹಾಗೆ ಹೇಳಬಾರದು ಎಂದು ಹೇಳಿ, ಪತ್ರಿಕೆಯ ವರದಿ ಅವರ ಹೇಳಿಕೆಯ ವಿರುದ್ಧವಾಗಿ ಇದ್ದರೆ ಪತ್ರಿಕೆಯವರಿಗೆ ಹೇಳಿ ಕಳುಹಿಸಿ ಆ ರೀತಿ ತಪ್ಪು ವರದಿ ಮಾಡಬೇಡಿ ಎಂದು ಹೇಳಿ. ಈ ವರದಿಯ ಮೇಲೆ ಜನರಿಗೆ ಗೊಂದಲ ಹುಟ್ಟಿದೆ. ಇದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ಎಂದು ಈ ಸಭೆಗೆ ತಿಳಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಕೋಣಂದೂರುಲಿಂಗಪ್ಪ.—ನಮ್ಮ ಹಿರಿಯರಾದಂಥ ಶ್ರೀಮಾನ್ ನಾಗಣ್ಣನವರು ಎತ್ತಿದಂಥ ಪ್ರಶ್ನೆ ಬಹಳ ಗಹನವಾದುದು. ಮಂತ್ರಿಗಳಿಗೆ ದಿನಕ್ಕೆ ಒಂದೊಂದು ಮಾತನಾಡುವ ಅಭ್ಯಾಸವಾಗಿದೆ. ಪತ್ರಿಕೆಗಳಲ್ಲಿ ಬಂದಿರುವುದು ಎಲ್ಲಾ ಡಿಸೋನ್ ಮಾಡುತ್ತಿದ್ದಾರೆ.

ಅಧ್ಯಕ್ಷರು.—ತಾವು ಇಲ್ಲದೆ ಇರುವುದಕ್ಕೆ ಉಪ್ಪು ಖಾರ ಬಣ್ಣ ಏನು ಹಾಕುವುದು ಬೇಡ.

High Fees Collected by the Private Colleges.

ಶ್ರೀ ಕೋಣಂದೂರು ಲಿಂಗಪ (ತೀರ್ಥಹಳ್ಳಿ).—ವಿದ್ಯಾ ಮಂತ್ರಿಗಳು ಬಂದಿದ್ದಾರೆ, ಅವರ ಗಮನಕ್ಕೆ ಮುಖ್ಯವಾದಂಥ ಮೂರು ಅಂಶಗಳನ್ನು ತರಲಿಕ್ಕೆ ಅಪೇಕ್ಷೆಪಡುತ್ತೇನೆ. ೧೨ ದಿವಸಗಳ ಹಿಂದೆ ನಾನು ಒಂದು ಗಮನ ಸೆಳೆಯುವ ಸೂಚನೆಯನು ಕಳುಹಿಸಿದ್ದೆ. ಖಾಸಗೀ ಕಾಲೇಜುಗಳಲ್ಲಿ ಫೀಸ್ ಜಾಸ್ತಿ ಮಾಡಿದ್ದಾರೆ. ಎಂದು ಚಳುವಳಿ ನಡೆದಿದೆ. ಮೂರು ದಿವಸದೆ ಕಾಲ ನಿಷೇದಾಜ್ಞೆ ಹಾಕಿದ್ದಾರೆ. ಕಾಲೇಜು ಅಧ್ಯಾಪಕರ ಬಗ್ಗೆ ಮ್ಯಾನೇಜ್‌ಮೆಂಟಿನವರು ಎಷ್ಟೂ ಕಡೆ ನಾನಾ ರೀತಿಯ ಕಿರುಕುಳ ಕೊಡುತ್ತಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯವು ಕನ್ನಡ ಮಧ್ಯಮ ವಿದ್ಯಾರ್ಥಿಗಳಿಗೆ ಅನ್ಯಾಯ ಆಗುತ್ತಾ ಇದೆ. ಅಲ್ಲಿ ಉಪಕುಲ ಪತಿಗಳು ಸರಿಯಾಗಿ ನಡೆದುಕೊಳ್ಳುತ್ತಾ ಇಲ್ಲ ಎಂದು ಸಾಕಷ್ಟು ಪತ್ರಿಕೆಗಳಲ್ಲಿ ಬಂದಿದೆ. ಇದರ ಬಗ್ಗೆ ಸರ್ಕಾರಕ್ಕೆ ನಿರಾಸಕ್ತಿ ಇದೆ. ಇದು ಚುರುಕು ಆಗುವಂತೆ ಆಗಬೇಕು. ಹೀಗೆ ಮುಂದುವರಿದರೆ ರಾಜ್ಯಾದ್ಯಂತ ವಿದ್ಯಾರ್ಥಿಗಳ ಅಧ್ಯಾಪಕರ, ಸಂಘಟನೆ ನಡೆಯುತ್ತದೆ. ಅಷ್ಟೇ ಅಲ್ಲ, ವಿಧ್ಯಾರ್ಥಿಗಳು ದೊಡ್ಡದಾಗಿ ಚಳುವಳಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಇದನ್ನು ಎಚ್ಚರಿಕೆಯಿಂದ ಗಮನಿಸಬೇಕು. ಮಾನ್ಯಮಂತ್ರಿಗಳು ಆ ದಿವಸ ಇದರ ಮೇಲೆ ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು ಹೇಳಿದ್ದರು.

ಅಧ್ಯಕ್ಷರು.—ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ, ತಾವು ಕೂತುಕೊಳ್ಳಿ.

ಶ್ರೀ ಕೋಣಂದೂರು ಲಿಂಗಪ್ಪ.—ಜಂಟಿ ಜವಾಬ್ದಾರಿ ಹೊಂದಿರತಕ್ಕ ಮಂತ್ರಿಗಳು ಇದ್ದಾರೆ, ಬೆಳಗಾಂನ ಪರಿಸ್ಥಿತಿಯ ಬಗ್ಗೆ ಜಂಟಿ ಜವಾಬ್ದಾರಿ ಹೊಂದಿರತಕ್ಕ ಮಂತ್ರಿಗಳು ಏತಕ್ಕೆ ಹೇಳಬಾರದಾಗಿತ್ತು.

ಶ್ರೀ ಕೆ. ಎಚ್. ಪಾಟೀಲ್.—ಜಂಟಿ ಜವಾಬ್ದಾರಿ ಇಲ್ಲ ಎಂದು ಹೇಳಿಲಿಲ್ಲ, ಹೇಳಬೇಕಾದರೂ ಸಹ; ಇಲ್ಲಿ ಕೂತುಕೊಂಡು ಪ್ರಿಂಸಂಪ್ಷನ್; ಅಸಂಪ್ಷನ್ ಮಾಡಿ ಹೇಳಲಿಕ್ಕೆ ಬರುವುದಿಲ್ಲ. ಫ್ಯಾಕ್ಟ್ ಏನು ಇದೆ ಎಂದು ತಿಳಿದುಕೊಂಡು ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರು ಶುಕ್ರವಾರ ಕೇಳಿದ್ದಕ್ಕೆ, ಸೋಮವಾರ ಸ್ಟೇಟ್‌ಮೆಂಟ್ ಮಾಡುತ್ತೇವೆ ಎಂದು ಹೇಳಿದ್ದೇವೆ. ಅದಕ್ಕಿಂತ ಮೊದಲು ಯಾವ ಮಂತ್ರಿಗಳೂ ಅಷ್ಟು ಬೇಗ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ತಮ್ಮ ನಿರಾಸಕ್ತಿ, ನಿರ್ಲಕ್ಷತೆಯ ಬಗ್ಗೆ ಗಮನ ಸೆಳೆಯುತ್ತೇನೆ.